






## ಹೃದಯ ಶಸ್ತ್ರಚಿಕಿತ್ಸೆ: ಎರಡು, ಮತ್ತೊಂದು...



ಸೃಷ್ಟಿಯ ರಹಸ್ಯಗಳನ್ನು ಭೇದಿಸುವ ಯತ್ನ ಸಾಹಿತ್ಯ, ಕಲೆ ಮತ್ತು ವಿಜ್ಞಾನ ರಂಗದಲ್ಲಿ ನಿರಂತರ. ವೈದ್ಯಕೀಯ ವಿಜ್ಞಾನ ಮನುಷ್ಯ ದೇಹವನ್ನು ಆವರಿಸಿಕೊಳ್ಳುವ ರೋಗಗಳ ಗ್ರಹಿಸಿ, ಗುರುತಿಸಿ ಪರಿಹಾರ ನೀಡುತ್ತದೆ. ಅದು ಅದರ ಧರ್ಮ. ಹೃದಯದ ಮೇಲೆ ನಡೆಯುತ್ತಿರುವಷ್ಟು ಪ್ರಯೋಗ ದೇಹದ ಮತ್ತಾವ ಅಂಗಗಳ ಬಗ್ಗೆ ನಡೆದಿರಲಿಕ್ಕಿಲ್ಲ. ಹೃದಯ ಕಾಯಿಲೆ ಜಗತ್ತನ್ನೇ ತಲ್ಲಣಗೊಳಿಸಿದೆ. ಈಗ ಸಂಭವಿಸುತ್ತಿರುವ ಬಹುತೇಕ ಸಾವುಗಳಿಗೆ ಹೃದಯ ಸಂಬಂಧಿ ಕಾಯಿಲೆ ಕಾರಣ. ಹೀಗಾಗಿ ವೈದ್ಯಕೀಯ ರಂಗ ಮುತುವರ್ಜಿ ವಹಿಸಿ ಹಲವು ಸಂಶೋಧನೆಗಳನ್ನು ನಡೆಸಿದೆ.

ನಮ್ಮ ದೇಶದಲ್ಲಿ ಈಗ ಹೃದಯ ಸಂಬಂಧಿ ಕಾಯಿಲೆಗೆ ಸೂಕ್ತ ಚಿಕಿತ್ಸೆ ಲಭ್ಯವಾಗುತ್ತಿದೆ. ಬೆಂಗಳೂರು ವಿಶ್ವಕ್ಕೆ ಮಾದರಿ ಎನ್ನುವಂಥ ಅಭಿವೃದ್ಧಿಯನ್ನು ಈ ನಿಟ್ಟಿನಲ್ಲಿ ಕಾಣುತ್ತಿದೆ. ಇಲ್ಲಿನ ಹಲವಾರು ನುರಿತ ವೈದ್ಯರು ವಿಶ್ವಮಾನ್ಯ ಚಿಕಿತ್ಸಕರಾಗಿ, ಸರ್ಜನ್ ಆಗಿ ಗುರುತಿಸಿಕೊಳ್ಳುತ್ತಿದ್ದಾರೆ. ಕರ್ನಾಟಕ ಒಂದರಲ್ಲೇ ವಿಶ್ವಖ್ಯಾತಿ ಹೊಂದಿದ ಹೃದ್ರೋಗ ಸಂಬಂಧಿ ಹಲವು ಆಸ್ಪತ್ರೆಗಳು ತಲೆ ಎತ್ತಿವೆ. ಸಂಶೋಧನಾ ಸಂಸ್ಥೆಗಳಿವೆ. ಹೆಚ್ಚಿನವುಗಳಲ್ಲಿ ಸಾಂಪ್ರದಾಯಿಕ ಎನ್ನುವಂಥ ಚಿಕಿತ್ಸಾ ವಿಧಾನವಿದೆ. ತೆರೆದ ಹೃದಯ ಚಿಕಿತ್ಸೆಯಲ್ಲಿ ಕೊರೊನರಿ ಆರ್ಟರೀ ಬೈಪಾಸ್ ಸರ್ಜರಿ (CABG) ತುಂಬ ಹಳೆಯ ಮತ್ತು ಸುಲಭದ ವಿಧಾನ.

ಈ ಚಿಕಿತ್ಸೆಯಲ್ಲಿ ರೋಗಿಗೆ ಗುಣವಾಗಲು ತುಂಬ ಸಮಯ ಬೇಕು. ಎಂದಿನ ಆರೋಗ್ಯಕರ ಲಯ ಕಂಡುಕೊಳ್ಳುವುದಕ್ಕೆ ತಿಂಗಳುಗಳೇ ಹಿಡಿಯುತ್ತದೆ. ಚಿಕಿತ್ಸೆಯ ನಂತರದ ಔಷಧೋಪಚಾರದ ಖರ್ಚುಗಳು ಕೂಡ ಹೆಚ್ಚು. ಅಷ್ಟು ಕಾಲ ನೋವು ಸಹಿಸಿಕೊಳ್ಳುವುದು ರೋಗಿಗೆ ಕಿರಿ ಕಿರಿ.

ಇದರಲ್ಲಿ ಸುಧಾರಣೆ ತರಲು ಹೊಸ ಚಿಕಿತ್ಸಾ ವಿಧಾನ ಆವಿಷ್ಕಾರಗೊಂಡಿದೆ. 'ಮಿನಿಮಲಿ ಇನ್‌ವೇಸಿವ್ ಕೊರೊನರಿ ಸರ್ಜರಿ' ಎನ್ನುವ ಚಿಕಿತ್ಸಾ ವಿಧಾನ ಅತ್ಯಾಧುನಿಕವಾದುದು. ಯುರೋಪ್, ಅಮೆರಿಕದಲ್ಲಿ ಇದು ಜನಪ್ರಿಯ. ಶಸ್ತ್ರಚಿಕಿತ್ಸೆಗೆ ತಗಲುವ ವೆಚ್ಚದಲ್ಲಿ ದುಬಾರಿಯಾದರೂ ಫಲಿತಾಂಶದ ದೃಷ್ಟಿಯಿಂದ, ಕಮ್ಮಿ ಔಷಧೋಪಚಾರ, ಬೇಗ ಆರೋಗ್ಯದ ಲಯ ಕಂಡುಕೊಳ್ಳುವುದಕ್ಕೆ ಸುಲಭವಾಗಿದ್ದರಿಂದ ಇದು ಹೆಚ್ಚು ಜನಪ್ರಿಯಗೊಳ್ಳುತ್ತಿದೆ.

### ಹೃದಯ ಶಸ್ತ್ರಚಿಕಿತ್ಸೆಯ ಚಾಲ್ತಿ ವಿಧಾನಗಳು

**ಕೊರೊನರಿ ಆರ್ಟರೀ ಬೈಪಾಸ್ ಸರ್ಜರಿ (CABG): ಇದು ಎದೆಯಲುಬು ಸೀಳಿ ನಡೆಸುವ ಸರ್ಜರಿ.**

ಪರಿಧಮನಿ (Coronary) ಹೃದಯ ಕಾಯಿಲೆಗೆ ಈ ಚಿಕಿತ್ಸಾ ವಿಧಾನ ಬಳಸುತ್ತಾರೆ. ದೇಹದ ಆರೋಗ್ಯಯುತ ಅಪಧಮನಿ (artery) ಅಥವಾ ರಕ್ತನಾಳವನ್ನು ಕಟ್ಟಿಕೊಂಡಿರುವ ಪರಿಧಮನಿಗೆ ಜೋಡಿಸುವ ಇಲ್ಲವೇ ಕಸಿ ಮಾಡುವ ವಿಧಾನವಿದು. ಹೀಗೆ ಜೋಡಿಸಲ್ಪಟ್ಟ ರಕ್ತನಾಳ ಈಗಾಗಲೇ ಕಟ್ಟಿಕೊಂಡಂತಿರುವ ಪ್ರದೇಶವನ್ನು ಬಿಟ್ಟು ಪರ್ಯಾಯ ಮಾರ್ಗವಾಗಿ ರಕ್ತ ಸಂಚಲನಕ್ಕೆ ದಾರಿ ಮಾಡಿಕೊಡುತ್ತದೆ. ಇದು ಆಕ್ಸಿಜನ್‌ನಿಂದ ಸಮೃದ್ಧ

ಇದೆಯೇ? ಇಷ್ಟು ದುಬಾರಿ ಉಪಕರಣಗಳನ್ನು ಹೊರಗಿನಿಂದಲೇ ತರಿಸಿಕೊಳ್ಳಬೇಕು. ನಮ್ಮಲ್ಲೇ ತಯಾರು ಮಾಡುವ ಬಗ್ಗೆ ಯಾಕೆ ಚಿಂತಿಸುವುದಿಲ್ಲ? ನಮ್ಮ ದೇಶದಲ್ಲಿಯೇ ಎಲ್ಲ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ತಯಾರಾದರೆ ಶಸ್ತ್ರಚಿಕಿತ್ಸೆಯ ವೆಚ್ಚ ಕೂಡ ಕಮ್ಮಿಯಾಗಬಹುದಲ್ಲ! ಸರ್ಜರಿ ದುಬಾರಿಯಾಗಲು ಉಪಕರಣಗಳ ದುಬಾರಿ ಬೆಲೆಯೂ ಕಾರಣ. ಇದರ ಬಗ್ಗೆ ನಮ್ಮ ಸರ್ಕಾರಗಳ ನೀತಿಗಳು, ಚಿಂತನಾ ಕ್ರಮ ವಾಸ್ತವಿಕ ನೆಲೆಯಲ್ಲಿ ರೂಪುಗೊಳ್ಳಬೇಕು' ಎಂದು ಡಾ. ಸಾತ್ಯಕಿ ವಿವರಿಸಿದರು.

ಸರ್ಜರಿ ಮುಗಿಯುವ ಹೊತ್ತಿಗೆ ಅವರು ಎಷ್ಟೊಂದು ವಿಷಯಗಳನ್ನು ಪ್ರಸ್ತಾಪಿಸಿದರು. ಉಳಿದ ಕೆಲಸವನ್ನು ಸಹಾಯಕ ಸರ್ಜನ್ ಮತ್ತು ನರ್ಸ್‌ಗಳು ಮಾಡಿ ಮುಗಿಸಿದರು. ಅಲ್ಲಿಯವರೆಗೆ ಅಷ್ಟು ತೆರಕೊಂಡಂತೆ ಕಾಣಿಸುತ್ತಿದ್ದ ಆ ದೇಹದ ಕಿಂಡಿ ಹೊಲಿಗೆಯಿಂದ ಮುಚ್ಚಿದಾಗ – ಅರೇ! ಸಣ್ಣಗೆ ಕೊರೆದ ಗಾಯದ ಹಾಗೆ ಕಾಣಿಸಿತಷ್ಟೇ. 'ನೋಡಿ, ಎರಡು ಗಂಟೆಯೊಳಗೆ ಇದೆಲ್ಲ ಮುಗಿದುಹೋಯಿತು' ಎಂದು ನಮ್ಮತ್ತ ನೋಡಿದರು ಡಾ. ಸಾತ್ಯಕಿ.

'ನಿಮಗೆ ಆಶ್ಚರ್ಯ ಆಗಬಹುದು. ನಾವು ತಿಂಗಳಿಗೆ ಕನಿಷ್ಠ 50ಕ್ಕೂ ಹೆಚ್ಚು ಇಂಥ ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತೇವೆ. ಒಮ್ಮೊಮ್ಮೆ ದಿನಕ್ಕೆ ನಾಲ್ಕರಿಂದ ಐದು ಇಂಥ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸುತ್ತೇವೆ' ಎಂದರು.

'ಸರ್, ನಮ್ಮ ದೇಶದಲ್ಲಿ ಇಂಥ ಎಷ್ಟು ಸರ್ಜನ್‌ಗಳಿದ್ದಾರೆ, ಅಂದಾಜಿಗೆ' ಎಂದಾಗ, ನಸುನಕ್ಕ ಡಾ. ಸಾತ್ಯಕಿ – 'ಕೇವಲ ಬೆರಳೆಣಿಕೆಯಷ್ಟು. ಇಡೀ ಕರ್ನಾಟಕದಲ್ಲೂ ಅಷ್ಟೇ' ಅಂದರು. ಅವರನ್ನೇ ದಿಟ್ಟಿಸಿದೆವು. ಇವರು ದೇಶದ ಈ ಪರಿಯ ಸರ್ಜರಿಯಲ್ಲಿ ಅತ್ಯಂತ ಶ್ರೇಷ್ಠ ಸರ್ಜನ್. ನಮ್ಮ ಹೆಮ್ಮೆಯ ಕನ್ನಡಿಗರು ಎನ್ನುವ ಅಭಿಮಾನ ಮೂಡಿ ಡಾ. ಸಾತ್ಯಕಿ ಅವರಿಗೊಂದು ಸೆಲ್ಯೂಟ್ ಹೊಡೆದೆ. ಅವರು ಪ್ರತಿಯಾಗಿ ಕಣ್ಣು ಮಿಟುಕಿಸಿ, ಓಟಿ ದಿರಿಸು